ಶ್ರೀ ಬಿ. ಎಲ್. ಗೌಡ.—17 ಸಾವಿರ ರೂಪಾಯಿಗಳಲ್ಲಿ 4,371-64 ಫೈಸೆ ಬ್ಯಾಂಕಿಗೆ ಕಟ್ಟಿಲ್ಲ, ಅದನ್ನು ಸೊಸೈಟಿಯ ವ್ಯವಹಾರದಲ್ಲಿ ತೊಡಗಿಸಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಹಣ ಜನಗಳಿಂದ ವಸೂಲಾಗಿ ಎಷ್ಟು ವರ್ಷವಾಗಿದೆ? ವಸೂಲಾಗಿದ್ದರೂ ಬ್ಯಾಂಕಿಗೆ ಕಟ್ಟದೆ ಇರುವುದಕ್ಕೆ ಕಾರಣವೇನು? ಅವರ ಮೇಲೆ ಕ್ರಮ ತೆಗೆದು ಕೊಳ್ಳದೆ ಇರುವುದಕ್ಕೆ ಕಾರಣವೇನು?

ಶ್ರೀ ಬಿ. ಎಲ್. ಗೌಡ.—ವಸೂಲಾಗಿ ಎಷ್ಟು ವರ್ಷವಾಯಿತು ಎನ್ನುವ ಮಾಹಿತಿ ಇಲ್ಲ. ಆ ಹಣವನ್ನು ಸೊಸೈಟಿಯ ವ್ಯವಹಾರದಲ್ಲಿ ತೊಡಗಿಸಿರುವುದು ಕಾನೂನಿಗೆ ವಿರೋಧವಾಗಿರುವುದರಿಂದ ಕ್ರಮ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ.

ಶ್ರೀ ಜಿ. ರಾಮೇಗೌಡ.—ಅರ್ಬಾವಧಿ ಮಧ್ಯಮಾವಧಿ ಸಾಲಗಳು ಎಷ್ಟು ವರ್ಷಗಳಿಂದ ಈ ಸಂಘದಲ್ಲಿ ನಿಂತಿವೆ? ಮಾರ್ಕೆಟಿಂಗ್ ಸೊಸೈಟಿ ಸರ್ವಿಸ್ ಸೊಸೈಟಿಗೆ ಸಾಲ ಕೊಡುವುದಕ್ಕೆ ಅಧಿಕಾರವಿದೆಯೇ?

ಶ್ರೀ ಬಿ. ಎಲ್. ಗೌಡ.—ಮಾರ್ಕೆಟಿಂಗೆ ಸೊಸೈಟಿ ಸರ್ವಿಸ್ ಸೊಸೈಟಿಗೆ ಸಾಲ ಕೊಟ್ಟಿಲ್ಲ. ನಾಲ್ಕೈದು ವರ್ಷದಿಂದ ಸಾಲ ಬಾಕಿ ಬಿದ್ದಿದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಜನಗಳಿಂದ ವಸೂರಾದ ಹಣವನ್ನು ಸೆಕ್ರೆಟರಿಯಾದವರು ಬ್ಯಾಂಕಿಗೆ ಪಾವತಿ ಮಾಡದೆ ಇರುವುದೇ ಮುಖ್ಯವಾದ ವಿಚಾರ. ಹಣ ವಸೂಲಾಗಿ ಎಷ್ಟು ವರ್ಷವಾಗಿದೆ ಎನ್ನುವ ವಿಷಯವನ್ನು ಕೊಡುವುದಿಲ್ಲ. ಏತಕ್ಕೋಸ್ಕರ ಆ ಮಾಹಿತಿ ಕೊಡುವುದಿಲ್ಲ? ಆ ಮಾಹಿತಿಯನ್ನು ಬೇಗ ಕೊಟ್ಟು, ತಕ್ಷಣ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವ ವಿಚಾರ ವಿದೆಯೋ ಇಲ್ಲವೋ ಎನ್ನುವುದನ್ನು ಖಚಿತವಾಗಿ ತಿಳಿಸುತ್ತಾರೆಯೇ?

ಶ್ರೀ ಬಿ. ಎಲ್. ಗೌಡ.—ಇದರಲ್ಲಿ ಯಾವುದನ್ನೂ ಬಚ್ಚಿಡಬೇಕು ಎಂದಿಲ್ಲ. 4,371-64 ಫೈಸೆ ಜನಗಳಿಂದ ವಸೂಲಾದುದನ್ನು ಅಕ್ರಮವಾಗಿ ಸೊಸೈಟಿಯ ವ್ಯವಹಾರಕ್ಕೆ ಉಪಯೋಗಿಸಿಕೊಂಡಿದ್ದಾರೆ. ಇದು ತಪ್ಪು. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ಹಣವನ್ನು ಸೊಸೈಟಿಯ ವ್ಯವಹಾರಗಳಿಗೆ ಉಪಯೋಗಿಸಿಕೊಂಡಿಲ್ಲ. ಸ್ವಂತಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. ಎಷ್ಟು ದಿವಸದಿಂದ ಹೀಗಾಗಿದೆ ಎನ್ನುವುದನ್ನು ವಿಚಾರಣೆ ಮಾಡದೆ ಕಾರ್ಯಕ್ರಮ ತೆಗೆದುಕೊಳ್ಳದೆ ಬಿಟ್ಟಿದ್ದಾರೆ. ಇದಕ್ಕೆ ಮೇಲಿನಿಂದ ಸರ್ಕಾರದಿಂದ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆದೇಶ ಕೊಟ್ಟು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕ್ರಮ ತೆಗೆದುಕೊಳ್ಳದ ಹಾಗೆ ತಡೆ ಹಾಕಿದ್ದಾರೆ. ಅದಕ್ಕಾಗಿ ಕೂಡಲೇ ಕ್ರಮ ತೆಗೆದು ಕೊಳ್ಳುತ್ತಾರೆಯೇ ಇಲ್ಲವೇ ಎನ್ನುವುದನ್ನು ತಿಳಿಸಬೇಕು.

ಶ್ರೀ ಬಿ. ಎಲ್. ಗೌಡ.—4371 ರೂಪಾಯಿಗಳು ಜನರಿಂದ ವಸೂಲಾಗಿರುವುದನ್ನು ಸಹಕಾರ ಸಂಘದ ವ್ಯವಹಾರದಲ್ಲಿ ತೊಡಗಿಸಿದ್ದಾರೆ ಎನ್ನುವುದಕ್ಕೆ ಸಾಕಷ್ಟು ಮಾಹಿತಿ ಇದೆ. ಗೊಬ್ಬರವನ್ನು ತೆಗೆದುಕೊಂಡಿದ್ದು ಸೊಸೈಟಿಯಲ್ಲಿ ತನಿಖೆ ಮಾಡಿದಾಗ ಅದರ ಸ್ಟಾಕ್ ಇತ್ತು. ಸಹಕಾರ ಸಂಘದ ಕಾರ್ಯದರ್ಶಿಯವರು ಉಪಯೋಗಿಸಿಕೊಂಡಿದ್ದಾರೆ ಎನ್ನುವುದು ನಮ್ಮ ಮಾಹಿತಿಯಲ್ಲಿ ಇಲ್ಲ. ಕಾರ್ಯದರ್ಶಿಯವರು 50 ರೂಪಾಯಿ 59 ಫೈಸೆ ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದಾರೆ. ಅದನ್ನು ವಸೂಲು ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇವೆ.

Drinking Water Facilities in K. R.Pet Municipal Area

25. Sri M. K. BOMME GOWDA (K. R. Pet).—

Will the Minister of State for Municipal Administration be pleased to state:—

(*a*) whether Government have sanctioned a scheme to supply drinking water to K. R. Pet Municipal area by utilising the Hemavathi River water;

(*b*) if so, whether the estimate for the same has been prepared?

Sri B. M. PATIL (Minister of State for Municipal Administration)—

(*a*) Not yet.

(*b*) Yes.

ಶ್ರೀ ಎಂ. ಕೆ. ಬೊಮ್ಮೇಗೌಡ.—ಹೇಮಾವತಿ ನದಿಯಿಂದ ಕೃಷ್ಣರಾಜಪೇಟೆಗೆ ನೀರನ್ನು ಒದಗಿಸುವುದಕ್ಕೆ ಸಂಬಂಧಪಟ್ಟ ಯೋಜನೆ ಇನ್ನೂ ಮಂಜೂರಾಗಿಲ್ಲವೆಂದು ಹೇಳಿದ್ದಾರೆ. ಅಭಾವಕ್ಕೆ ತುತ್ತಾಗುವ ಪ್ರದೇಶಗಳಲ್ಲಿ ಒಂದಾದ ಮತ್ತು ನೀರಿಗೆ ಬಹಳ ತೊಂದರೆಯಾಗಿರುವ ಆ ಊರಿಗೆ ನೀರನ್ನು ಎಷ್ಟು ದಿವಸಗಳಲ್ಲಿ ಒದಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ ಎಂದು ತಿಳಿಸುತ್ತಾರೆಯೇ ?

† ಶ್ರೀ ಬಿ. ಎಂ. ಪಾಟೀಲ್.—ಕೃಷ್ಣರಾಜಪೇಟೆಯಲ್ಲಿ ನೀರಿನ ಅಭಾವವಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಸರ್ವೆ ಕೆಲಸ ಮುಗಿದಿದ್ದು ಪ್ಲಾನ್, ಎಸ್ಟಿಮೇಟ್ ಎಲ್ಲ ಮುಗಿದು ಎಕ್ಸಿಕ್ಯೂಟಿವ್ ಇಂಜಿನಿಯರ ಕಡೆಗೆ ಇದೆ. 12,50,000 ರೂಪಾಯಿಗಳಿಗೆ ಎಸ್ಟಿಮೇಟ್ ಆಗಿದೆ. ಅದು ಸರ್ಕಾರಕ್ಕೆ ಬಂದ ಕೂಡಲೇ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

Sri B. B. SAYANAK.—May I know when the seheme to supply drinking water to K. R. Pet Municipal Area was estimated and what is the cost ?

Sri B. M. PATIL.—I have already said that the estimate is approximately Rs. 12,50,000. It is now pending with the Executive Engineer, Mysore Division.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸ್ವಾಮಿ, ಕೃಷ್ಣರಾಜಪೇಟೆ ಪುರಸಭಾ ಪ್ರದೇಶಕ್ಕೆ ಕುಡಿಯುವ ನೀರು ಸರಬರಾಜು ಮಾಡಬೇಕೆಂದು ಬಾವಿ ತೆಗೆದು ಆ ಬಾವಿ ಫೈಲ್ಯೂರ್ ಆದಮೇಲೆ ಹೇಮಾವತಿ ನದಿಯ ನೀರನ್ನು ಉಪಯೋಗಿಸಿಕೊಂಡು ಅಲ್ಲಿಗೆ ನೀರು ಸರಬರಾಜು ಮಾಡಬೇಕೆಂದು ಎಷ್ಟೋ ದಿವಸದಿಂದ ಹೇಳುತ್ತಿದ್ದೀರಿ. ಇದಕ್ಕೆ ಸಂಬಂಧಪಟ್ಟ ರಿಕಾರ್ಡ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಹತ್ತಿರ ಎಷ್ಟು ದಿವಸದಿಂದ ಪೆಂಡಿಂಗ್‌ನಲ್ಲಿ ಇದೆ ?

ಶ್ರೀ ಬಿ. ಎಂ. ಪಾಟೀಲ್.—ಆ ರಿಕಾರ್ಡ್ ಎಕ್ಸಿಕ್ಯೂಟೀವ್ ಇಂಜನಿಯರ್ ಹತ್ತಿರ ಬಹಳ ದಿವಸದಿಂದ ಇಲ್ಲ. ಈಗಾಗಲೇ ಇದರ ಬಗ್ಗೆ ಒಂದು ಸ್ಕೀಮನ್ನು ಹಾಕಿ ಇಂಪ್ಲಿಮೆಂಟ್ ಮಾಡಿದ್ದೇವೆ. ಅದರ ಪ್ರಕಾರ ಬೋರ್‌ವೆಲ್ ತೆಗೆದು ಕೃಷ್ಣರಾಜಪೇಟೆಗೆ ನೀರು ಸಪ್ಲೈ ಮಾಡಿದ್ದೇವೆ. ಇದಕ್ಕೆ ಒಂದು ಕಾಂಪ್ರಹೆನ್ಸೀವ್ ಸ್ಕೀಮನ್ನು ತಯಾರು ಮಾಡಿದ್ದೇವೆ. ಅದು ಎಕ್ಸಿಕ್ಯೂಟಿವ್ ಇಂಜನಿಯರಿಂದ ಬರಲು ಬಹಳ ದಿವಸ ಆಗುವುದಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಆ ಸ್ಕೀಮನ್ನು ಎಷ್ಟು ದಿವಸದಲ್ಲಿ ಬರುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಅದು ಬಹಳ ದಿವಸ ದಿಲೇ ಆಗುವುದಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಸ್ವಾಮಿ, ಈ ನೀರಿನ ಯೋಜನೆ ಬಹಳ ದಿವಸದಿಂದಲೂ ನಿಮ್ಮ ಹತ್ತಿರ ಪೆಂಡಿಂಗ್ ಇದೆ. ಆದುದರಿಂದ ಶ್ರೀ ಬೊಮ್ಮೇಗೌಡರು ಈ ಕಡೆಯ ಸದಸ್ಯರಾಗಿರುವಾಗಲೇ ಈ ಯೋಜನೆ ಆದರೆ, ಅವರ ಕಾಲದಲ್ಲೇ ಮಾಡಿದಂತಾಗುತ್ತದೆ. ಅದನ್ನು ಯೋಚನೆ ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಅದು ಮಾನ್ಯ ಸದಸ್ಯರ ಅಭಿಪ್ರಾಯ. ಅದು ಬಹಳ ಸತ್ಯಕ್ಕೆ ದೂರವಾದುದು.